RNU AIR DHARWAD

MAY 24, 2024

ALL INDIA RADIO - DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಮುಂಗಾರು ಪೂರ್ವ ಮಳೆ, ಆಶಾದಾಯಕ; ರಾಜ್ಯಾದ್ಯಂತ ಬಿತ್ತನೆ ಕಾರ್ಯ ಚುರುಕುಗೊಳಿಸಲು, ಜಿಲ್ಲಾಡಳಿತಗಳಿಗೆ ಮುಖ್ಯಮಂತ್ರಿ, ಸೂಚನೆ.
- ಬೆಳೆ ಹಾನಿ; ಧಾರವಾಡ ಜಿಲ್ಲೆಯಲ್ಲಿ, 4 ಸಾವಿರದ 918 ರೈತರ, ತಾಂತ್ರಿಕ ದೋಷ ಪರಿಹಾರ – ಜಿಲ್ಲಾಧಿಕಾರಿ, ದಿವ್ಯಾ ಪ್ರಭು.
- ಎರಡನೇ ದಿನವಾದ ಇಂದು, ಟ್ರಾನ್ಸಿಟ್ ಮಾದರಿಯಲ್ಲಿ ಆನೆಗಳ ವಿಶೇಷ ಗಣತಿ.
- ಸ್ಕೀಜೋಫ್ರೆನಿಯಾ ವಿಶ್ವ ದಿನ; ಇಂದು ರಾಜ್ಯದ ವಿವಿಧೆಡೆ ಜನ ಜಾಗ್ರತಿ ಕಾರ್ಯಕ್ರಮ.

<><><>

ಈಗ ವಾರ್ತೆಗಳ ವಿವರ

<><><>

ಮುಂಗಾರು ಪೂರ್ವ ಮಳೆ, ರಾಜ್ಯಾದ್ಯಂತ ಉತ್ತಮವಾಗಿದೆ. ಬಿತ್ತನೆ ಕಾರ್ಯ ಚುರುಕುಗೊಳಿಸಲು, ಆಯಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯ್ತಿ ಸಿ.ಇ.ಓಗಳು, ಮೇಲುಸ್ತುವಾರಿ ವಹಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ, ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ಅವರು, ಬರಗಾಲ ನಿರ್ವಹಣೆಯ ಪ್ರಗತಿ ಪರಿಶೀಲಿಸಿದರು. ಜೂನ್ 6ರ ವರೆಗೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದೆ. ತುರ್ತು ಕೆಲಸಗಳಿಗೆ ಒತ್ತು ನೀಡುವಂತೆ ಅಧಿಕಾರಿಗಳಿಗೆ ಹೇಳಿದರು. ಹಾವೇರಿಯಲ್ಲಿ ರೈತರು ಸಾಲುಗಟ್ಟಿ ನಿಂತ ಮಾಧ್ಯಮ ವರದಿ ಉಲ್ಲೇಖಿಸಿದ ಮುಖ್ಯಮಂತ್ರಿ, ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಕೊರತೆಯಾಗದಂತೆ, ತುರ್ತಾಗಿ ಸಮರ್ಪಕ ಕ್ರಮಕೈಗೊಳ್ಳಬೇಕು. ಬರ ಪರಿಹಾರ ಮೊತ್ತವನ್ನು ರೈತರ ಸಾಲಕ್ಕೆ ವಜಾ ಮಾಡಿಕೊಳ್ಳದಂತೆ, ಬ್ಯಾಂಕರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು, ಮುಖ್ಯಮಂತ್ರಿ ತಿಳಿಸಿದರು.

<><><>

ರಾಜ್ಯದ ಯಾವುದೇ ಭಾಗದಲ್ಲಿ ಕಲುಷಿತ ನೀರು ಪೂರೈಕೆ ಮತ್ತು ಸೇವನೆಯಿಂದ ತೊಂದರೆಯಾದರೆ, ಆಯಾ ಜಿಲ್ಲಾಧಿಕಾರಿಗಳೇ ಹೊಣೆ ಎಂದು, ಮುಖ್ಯಮಂತ್ರಿ ಎಚ್ಚರಿಸಿದರು. ತಪ್ಪಿತಸ್ಥ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಲಾಗುವುದು ಎಂದೂ ಸ್ಪಷ್ಟ ಪಡಿಸಿದರು.

<><><>

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು, ಕೆ. ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ, ಓರ್ವ ಯುವಕ ಮೃತಪಟ್ಟ ಹಿನ್ನೆಲೆ, ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ ಎಂದು ತಿಳಿಸಿದರು.

<><><>

ಧಾರವಾಡ ಜಿಲ್ಲೆಯಾದ್ಯಂತ, 6 ಸಾವಿರದ 83 ಜನ ರೈತರ ಖಾತೆಗಳಿಗೆ, ಕೆಲ ತಾಂತ್ರಿಕ ಕಾರಣಗಳಿಂದಾಗಿ, ಪರಿಹಾರ ಮೊತ್ತ ಜಮೆಯಾಗಿಲ್ಲ. ಆ ಪೈಕಿ 4 ಸಾವಿರದ 918 ರೈತರ ತಾಂತ್ರಿಕ ದೋಷಗಳನ್ನು ಸರಿಪಡಿಸಲಾಗಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಧಾರವಾಡ ಜಿಲ್ಲೆಯಲ್ಲಿ ಈಗಾಗಲೇ ಒಂದು ಲಕ್ಷದ 6 ಸಾವಿರದ 707 ಜನ ರೈತರಿಗೆ, 108 ಕೋಟಿ 12 ಲಕ್ಷ ರೂಪಾಯಿ ಖಾತೆಗೆ ವರ್ಗಾಯಿಸಲಾಗಿದೆ ಎಂದರು. ಮಳೆಯಾಶ್ರಿತ 1 ಹೆಕ್ಟೇರ್ ಬೆಳೆ ಹಾನಿಗೆ, ಎಂಟೂವರೆ ಸಾವಿರ ರೂಪಾಯಿ ಹಾಗೂ ನೀರಾವರಿ ಆಶ್ರಿತ 1 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಗೆ, 17 ಸಾವಿರ ರೂಪಾಯಿಯಂತೆ, ಗರಿಷ್ಠ 2 ಹೆಕ್ಟೇರ್‌ಗೆ, ಪಾವತಿಸಲಾಗಿದೆ ಎಂದು ಜಿಲ್ಲಾಧಿಕಾರಿ, ಮಾಹಿತಿ ನೀಡಿದರು.

<><><>

ಕಾರವಾರ ಜಿಲ್ಲೆಯ 118 ಗ್ರಾಮಗಳಲ್ಲಿ, ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿದ್ದು, ಈ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಮತ್ತು ಖಾಸಗಿ ಕೊಳವೆ ಬಾವಿಗಳ ಮೂಲಕ, ನೀರು ಪೂರೈಕೆ ಮಾಡಲಾಗಿದೆ ಎಂದು, ಉತ್ತರಕನ್ನಡ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ, ಮುಖ್ಯಮಂತ್ರಿಯವರಿಗೆ ತಿಳಿಸಿದರು. ಮುಖ್ಯಮಂತ್ರಿ ಅವರೊಂದಿಗಿನ ವಿಡಿಯೋ ಸಂವಾದದಲ್ಲಿ ಅವರು ಈ ಮಾಹಿತಿ ನೀಡಿದರು.

<><><>

ವಿಜಯಪುರ ಜಿಲ್ಲೆಯ ವಿವಿಧ ತಾಲೂಕಿನ 119 ಗ್ರಾಮಗಳ, 654 ಜನ ವಸತಿಗಳಿಗೆ, 294 ಟ್ಯಾಂಕರ್ ಮೂಲಕ, 588 ಟ್ರಿಪ್ ಕುಡಿಯುವ ನೀರು ಸರಬರಾಜು ಮಾಡಲಾಗಿದೆ ಎಂದು, ಜಿಲ್ಲಾಧಿಕಾರಿ ಟಿ. ಭೂ ಬಾಲನ್, ಮುಖ್ಯಮಂತ್ರಿಯವರಿಗೆ ವಿವರಿಸಿದರು. ರಾಜ್ಯದಲ್ಲಿಯೇ, ಅತೀ ಹೆಚ್ಚು ಬೆಳೆ ಹಾನಿ ಪರಿಹಾರ ಧನ, ರೈತರ ಖಾತೆಗೆ ಕಾಲಮಿತಿಯಲ್ಲಿ ಜಮೆಯಾಗಿರುವುದಕ್ಕೆ, ಕಂದಾಯ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು, ಅವರು ತಿಳಿಸಿದರು.

<><><>

ಸ್ಕೀಜೋಫ್ರೇನಿಯಾ ವಿಶ್ವ ದಿನದ ಹಿನ್ನೆಲೆ, ಇಂದು ಧಾರವಾಡ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ – ಡಿಮ್ಹಾನ್ಸ್ ಸಭಾಂಗಣದಲ್ಲಿ, ಬೆಳಗ್ಗೆ 10 ಗಂಟೆಗೆ ಜನ ಜಾಗ್ರತಿ ಕಾರ್ಯಕ್ರಮ ಆಯೋಜಿತವಾಗಿದೆ. ಧಾರವಾಡ ಜಿಲ್ಲೆ ಹಿರಿಯ ಸಿವಿಲ್ ನ್ಯಾಯಾಧೀಶ, ಪರಶುರಾಮ ದೊಡ್ಡಮನಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸ್ಕೀಜೋಫ್ರೇನಿಯಾ ಖಾಯಿಲೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಡಿಮ್ಹಾನ್ಸ್ ಸಂಸ್ಥೆಯ ನಿರ್ದೇಶಕ ಡಾಕ್ಟರ್ ಸಿ. ಅರುಣಕುಮಾರ.

<><><>

ಡಾಕ್ಟರ್ ಸಿ. ಅರುಣಕುಮಾರ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯದ ಜೊತೆ ಗಡಿ ಹಂಚಿಕೊಂಡಿರುವ, 5 ರಾಜ್ಯಗಳಲ್ಲಿ ಆನೆಗಳ ವಿಶೇಷ ಗಣತಿ ಕಾರ್ಯ ಅರಣ್ಯ ಇಲಾಖೆ ಆರಂಭಿಸಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ಆನೆಗಳ ಗಣತಿ ನಡೆಯುತ್ತದೆ. ಆದರೆ ಇದೇ ಮೊದಲ ಬಾರಿಗೆ, ಕರ್ನಾಟಕ, ತಮಿಳುನಾಡು, ಕೇರಳ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಗಡಿಗಳಲ್ಲಿ, ಮೂರು ದಿನ ಆನೆಗಳ ಗಣತಿ ನಡೆಯುತ್ತಿದೆ. ಎರಡನೇ ದಿನವಾದ ಇಂದು, ಟ್ರಾನ್ಸಿಟ್ ಮಾದರಿಯಲ್ಲಿ ಆನೆ ಗಣತಿ ಮುಂದುವರೆಯಲಿದೆ. ಮೂರನೇ ದಿನವಾದ ನಾಳೆ, 25ರಂದು, ನೀರ್ಗುಂಡಿಗಳ ಬಳಿ, ವಾಟರ್ ಹೋಲ್ ಕೌಂಟ್ ಮೂಲಕ ಗಣತಿ ನಡೆಯಲಿದೆ. ಕಾಡಾನೆಗಳನ್ನು ಮಾತ್ರ ಸಮೀಕ್ಷಿಸಲಾಗುತ್ತಿದೆ ಎಂದು, ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

<><><>

ಈ ಮಧ್ಯೆ, ಅರಣ್ಯ ಖಾತೆ ಸಚಿವ ಈಶ್ವರ್ ಖಂಡ್ರೆ, ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನಲ್ಲಿ ಒತ್ತುವರಿಯಾಗಿದ್ದ, 60 ಕೋಟಿ ರೂಪಾಯಿ ಮೌಲ್ಯದ, 5 ಎಕರೆ ಅರಣ್ಯ ಭೂಮಿಯನ್ನು ತೆರವುಗೊಳಿಸಲಾಗಿದೆ ಎಂದು, ತಿಳಿಸಿದರು.

ಈಗಾಗಲೇ ವಶ ಪಡಿಸಿಕೊಳ್ಳಲಾದ ಅರಣ್ಯ ಉತ್ಪನ್ನಗಳು, ವನ್ಯಜೀವಿ ಅಂಗಾಂಗಳ ವಿಲೇವಾರಿ ಬಗ್ಗೆ ಕೇಂದ್ರ ತೀರ್ಮಾನಿಸಲಿದೆ ಎಂದರು.

<><><>

ಕಡಲಾಮೆ ವಿಶ್ವ ದಿನವನ್ನು, ಗುರುವಾರ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ವಿಶಿಷ್ಟವಾಗಿ ಆಚರಿಸಿ, ಅವುಗಳ ಆವಾಸ ಸ್ಥಾನ ಸಂರಕ್ಷಣೆಗೆ, ಸಾಮುದಾಯಿಕ ಸಹಭಾಗಿತ್ವದ ಮಹತ್ವ ಕುರಿತು, ಜನ ಜಾಗ್ರತಿ ಮೂಡಿಸಲಾಯಿತು. ಉತ್ತರಕನ್ನಡ ಜಿಲ್ಲೆ ಕಾರವಾರದ, ಕಡಲ ಜೀವಶಾಸ್ತ್ರ ಅಧ್ಯಯನ ವಿಭಾಗದ ವಿಶ್ರಾಂತ ಮುಖ್ಯಸ್ಥ, ಕುಮಟಾದ ಪ್ರೊಫೆಸರ್ ವಿ.ಎನ್. ನಾಯಕ್, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂಶೋಧನೆಯ ಮಾಹಿತಿ ನೀಡಿದ್ದಾರೆ.

<><><>

ಪ್ರೊ. ವಿ.ಎನ್. ನಾಯಕ್ ಧ್ವನಿ 50 ಸೆಕೆಂದುಗಳು

<><><>

ಬೆಂಗಳೂರಿನ ಕೋರಮಂಗಲದ ಬಂಗ್ಲೆಯೊಂದಕ್ಕೆ ದಾಳಿ ಮಾಡಿದ, ಅರಣ್ಯ ಇಲಾಖೆ ಅಪರಾಧ ತನಿಖಾ ದಳ, 9 ನಕ್ಷತ್ರ ಆಮೆಗಳನ್ನು ರಕ್ಷಿಸಿದೆ.

<><><>

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗುವ ಸಾಧ್ಯತೆ ಹಿನ್ನೆಲೆ, ಇಂದು ಸಮುದ್ರಕ್ಕೆ ಇಳಿಯದಂತೆ, ಮೀನುಗಾರರಿಗೆ ಭಾರತೀಯ ಹವಾಮಾನ ಇಲಾಖೆ, ಮುನ್ನೆಚ್ಚರಿಕೆ ನೀಡಿದೆ. ಸಾಂಪ್ರದಾಯಿಕ ಮೀನುಗಾರರು, ಸಮುದ್ರ ದಡದಲ್ಲಿ ಲಂಗರು ಹಾಕಿದ ದೋಣಿ ಮತ್ತು ಬಲೆಗಳನ್ನು, ಸುರಕ್ಷಿತವಾಗಿಟ್ಟುಕೊಳ್ಳುವಂತೆ, ಉತ್ತರಕನ್ನಡ ಜಿಲ್ಲೆ ಮೀನುಗಾರಿಕೆ ಜಂಟಿ ನಿರ್ದೇಶಕರು ಕೋರಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬುದ್ಧ ಪೌರ್ಣಿಮೆ ಅಂಗವಾಗಿ, ಗುರುವಾರ ರಾಜ್ಯಾದ್ಯಂತ ಬೌದ್ಧ ಸ್ಥೂಪ ಹಾಗೂ ಮಂದಿರಗಳಲ್ಲಿ ವಿಶೇಷ ಪೂಜಾ ಕಾರ್ಯಕ್ರಮ, ಶ್ರದ್ಧಾ ಭಕ್ತಿಯಿಂದ ಜರುಗಿತು.

<><><>

ಬೆಂಗಳೂರಿನಲ್ಲಿ ಮಹಾಬೋಧಿ ಸೊಸೈಟಿಯಲ್ಲಿ, ಬುದ್ಧ ಪೂರ್ಣಿಮೆಯನ್ನು ಆಚರಿಸಲಾಯಿತು.

<><><>

ಚಿತ್ರದುರ್ಗದ ಬುದ್ಧ ವಿಹಾರ ಕೇಂದ್ರದಲ್ಲಿ ಆಯೋಜಿಸಿದ್ದ, ವೈಶಾಖ ಬುದ್ಧ ಪೌರ್ಣಿಮೆ ಕಾರ್ಯಕ್ರಮಕ್ಕೆ, ಮಾಜಿ ಶಾಸಕಿ ಕೆ.ಪೂರ್ಣಿಮಾ ಚಾಲನೆ ನೀಡಿದರು.

<><><>

ರಾಯಚೂರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ, ಆರೋಗ್ಯಕರ ಆಯುಷ್ ಚಿಂಚಾ ಪಾನಕವನ್ನು, ಸಾರ್ವಜನಿಕರು ಹಾಗೂ ಸಿಬ್ಬಂದಿಗೆ ವಿತರಿಸಲಾಯಿತು.

<><><>

ಹೋಂ ಸ್ಟೇಗಳಲ್ಲಿ ಬೋಟಿಂಗ್, ಕಯಾಕಿಂಗ್ ಸೇರಿದಂತೆ, ಜಲ ಸಾಹಸ ಕ್ರೀಡಾ ಚಟುವಟಿಕೆ ನಡೆಸುತ್ತಿದ್ದಲ್ಲಿ, ಕಡ್ಡಾಯವಾಗಿ ಪೂರ್ವಾನುಮತಿ ಪಡೆದುಕೊಳ್ಳುವಂತೆ, ಉತ್ತರಕನ್ನಡ ಜಿಲ್ಲಾ ಪ್ರವಾಸೋದ್ಯಮ ಇಲಾಖೆ ತಿಳಿಸಿದೆ.

<><><>

ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯಲ್ಲಿ ಜನವಸತಿ ಪ್ರದೇಶಗಳಲ್ಲಿ, ಹಾವುಗಳನ್ನು ರಕ್ಷಿಸುತ್ತಿರುವ ಸ್ವಯಂಸೇವಕರಿಗೆ, ಅರಣ್ಯ ಇಲಾಖೆ ಇದೇ 28, ಮಂಗಳವಾರ ಬಳ್ಳಾರಿಯಲ್ಲಿ, ತರಬೇತಿ ಕಾರ್ಯಾಗಾರ ಆಯೋಜಿಸಿದೆ.

<><><>

ಇಂಜಿನಿಯರಿಂಗ್ 3ನೇ ಸೆಮಿಸ್ಟರ್‌ಗೆ, ಲ್ಯಾಟರಲ್ ಎಂಟ್ರಿ ಮೂಲಕ ಸೇರಬಯಸುವ ಡಿಪ್ಲೊಮಾ ವಿದ್ಯಾರ್ಥಿಗಳಿಗೆ, ಜೂನ್ 22ರಂದು DCET ಪರೀಕ್ಷೆಯನ್ನು, 12 ಜಿಲ್ಲೆಗಳಲ್ಲಿ ಆಫ್‌ಲೈನ್ ನಡೆಸಲಾಗುತ್ತಿದೆ.

<><><>

ಉನ್ನತ ಶಿಕ್ಷಣ ಶಿಕ್ಷಕರಿಗೆ, ರಾಷ್ಟ್ರೀಯ ಪುರಸ್ಕಾರ ನೀಡಲು, ನಾಮ ನಿರ್ದೇಶನಕ್ಕಾಗಿ, ಉನ್ನತ ಶಿಕ್ಷಣ ಇಲಾಖೆ, ಪೋರ್ಟಲ್‌ಗೆ ಚಾಲನೆ ನೀಡಿದೆ. ಜೂನ್ 20, ನಾಮ ನಿರ್ದೇಶನಕ್ಕೆ ಕೊನೆ ದಿನವಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮುಂಗಾರು ಪೂರ್ವ ಮಳೆ, ಆಶಾದಾಯಕ; ರಾಜ್ಯಾದ್ಯಂತ ಬಿತ್ತನೆ ಕಾರ್ಯ ಚುರುಕುಗೊಳಿಸಲು, ಜಿಲ್ಲಾಡಳಿತಗಳಿಗೆ ಮುಖ್ಯಮಂತ್ರಿ, ಸೂಚನೆ.
- ಬೆಳೆ ಹಾನಿ; ಧಾರವಾಡ ಜಿಲ್ಲೆಯಲ್ಲಿ, 4 ಸಾವಿರದ 918 ರೈತರ, ತಾಂತ್ರಿಕ ದೋಷ ಪರಿಹಾರ – ಜಿಲ್ಲಾಧಿಕಾರಿ, ದಿವ್ಯಾ ಪ್ರಭು.
- ಎರಡನೇ ದಿನವಾದ ಇಂದು, ಟ್ರಾನ್ಸಿಟ್ ಮಾದರಿಯಲ್ಲಿ ಆನೆಗಳ ವಿಶೇಷ ಗಣತಿ.
- ಸ್ಕೀಜೋಫ್ರೆನಿಯಾ ವಿಶ್ವ ದಿನ; ಇಂದು ರಾಜ್ಯದ ವಿವಿಧೆಡೆ ಜನ ಜಾಗ್ರತಿ ಕಾರ್ಯಕ್ರಮ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>